

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೬

**ಈ** ಬಾರಿಯೂ ಮದ್ರಾಸಿನಿಂದ ಅವಿನಾಶಿಯವರು ಬಂದು ಮಹಾರಾಜರನ್ನು ಭೇಟಿಯಾದರು. ಇವರು ಒಂದು ದಿನ ವಾಲ್ಟೇರಿನ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಆದ ಸಿ. ಆರ್ ರೆಡ್ಡಿಯವರನ್ನು ಆಶ್ರಮಕ್ಕೆ ಕರೆದುಕೊಂಡು ಬಂದಿದ್ದರು. ಅವರೊಂದಿಗೆ ವಿರಜಾನಂದರು ರಾಮಕೃಷ್ಣ-ವಿವೇಕಾನಂದರ ಬಗ್ಗೆ ಸ್ವಲ್ಪ ಹೊತ್ತು ಮಾತನಾಡಿದರು. ಈ ಯುಗಪುರುಷರೀರ್ವರ ಬಗ್ಗೆ ರೆಡ್ಡಿಯವರಿಗೆ ಅಗಾಧವಾದ ಶ್ರದ್ಧಾ-ಭಕ್ತಿ. ಅವರು ದಕ್ಷಿಣೇಶ್ವರವನ್ನೂ ಸಹ ನೋಡಿದ್ದರು. ಆದರೆ ಎಂದೂ ಬೇಲೂರು ಮಠಕ್ಕೆ ಹೋಗಿರಲಿಲ್ಲ. ಮಠವನ್ನು ನೋಡುವ ಇಚ್ಛೆ ತಮಗಿಲ್ಲವೆಂದೂ ಹೇಳಿದರು. ಇದನ್ನು ಕೇಳಿದ ವಿರಜಾನಂದರು ಚಕಿತರಾದರು. ಹೋದ ವರ್ಷದಂತೆ ಈ ಬಾರಿಯೂ ಸಹ ವಿಶಾಖಪಟ್ಟಣದಲ್ಲಿ ದಕ್ಷಿಣಭಾರತದ ನಾನಾ ಸ್ಥಳಗಳಿಂದ ಬಂದ ಅನೇಕ ಭಕ್ತರಿಗೆ ಮಹಾರಾಜರು ಮಂತ್ರದೀಕ್ಷೆ ನೀಡಿದರು.

ಸಂಘದ ಬಹುಗುಣಾನ್ವಿತ ಕರ್ಮಯೋಗಿಗಳಾಗಿದ್ದ ಸ್ವಾಮಿ ವಿಪುಲಾನಂದರು ಕೊಲಂಬೋದಲ್ಲಿ ತಮ್ಮ ೫೫ನೇ ವಯಸ್ಸಿನಲ್ಲಿ ಪಾರ್ಶ್ವವಾಯುವಿನಿಂದಾಗಿ ದೇಹತ್ಯಾಗ ಮಾಡಿದರು (ಜುಲೈ ೨೦, ೧೯೪೭) ಎಂಬ ಸಮಾಚಾರ ಜುಲೈ ೨೩ರಂದು ವಿರಜಾನಂದರನ್ನು ತಲುಪಿತು. ತಮಿಳು ಸಾಹಿತ್ಯದಲ್ಲಿ ಅವರಿಗಿದ್ದ ಪಾಂಡಿತ್ಯ ಮತ್ತು ವಾಗ್ಮಿತೆಯು ದಕ್ಷಿಣಭಾರತ ಮತ್ತು ಶ್ರೀಲಂಕಾದಲ್ಲಿ ಸರ್ವಜನವಿದಿತವಾಗಿತ್ತು. ಶ್ರೀಲಂಕಾದ ನಾನಾ ಸ್ಥಳಗಳಲ್ಲಿ ಸ್ಥಾಪಿತವಾಗಿದ್ದ ಸಂಘದ ಅನೇಕ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರೂ, ಪರಿಚಾಲಕರೂ ಅವರೇ ಆಗಿದ್ದರು. ಸಂಘದ ಕಾರ್ಯ ಸಮಿತಿಯ ಅನುಮತಿಯ ಮೇರೆಗೆ ವಿಪುಲಾನಂದರು ೧೯೩೧ರಿಂದ ೧೯೩೩ರವರೆಗೆ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ತಮಿಳಿನ ಪ್ರಧಾನ ಅಧ್ಯಾಪಕರಾಗಿಯೂ, ಪ್ರಾಚ್ಯ ವಿದ್ಯಾಧ್ಯಯನ ವಿಭಾಗದ ಮುಖ್ಯಸ್ಥರೂ ಆಗಿದ್ದರು. ಶ್ರೀಲಂಕಾದ ವಿಶ್ವವಿದ್ಯಾಲಯದವರೂ ಸಹ ಅವರ ಅಗಾಧ ಪಾಂಡಿತ್ಯದ ಉಪಯೋಗ ಪಡೆಯಲೋಸುಗ ಅವರನ್ನು ೧೯೪೩ರಿಂದ ತಮಿಳಿನ ಅಧ್ಯಾಪಕರನ್ನಾಗಿ ನೇಮಿಸಿದ್ದರು. ಕೆಲವು ವರ್ಷಗಳ ಕಾಲ ಅವರು ಸಂಘದ ಇಂಗ್ಲಿಷ್ ಪತ್ರಿಕೆಗಳಾದ 'ವೇದಾಂತ ಕೇಸರಿ', 'ಪ್ರಬುದ್ಧಭಾರತ' ಮತ್ತು ತಮಿಳು ಮಾಸಿಕವಾದ 'ಶ್ರೀರಾಮಕೃಷ್ಣ ವಿಜಯಂ'ಗಳ ಸಂಪಾದಕರಾಗಿ ತುಂಬ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದರು. 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಕೃತಿಯ ಕೆಲವು ಭಾಗಗಳನ್ನು ಅವರು ತಮಿಳಿಗೆ ಅನುವಾದ ಮಾಡಿದ್ದು ಅವರಿಗೆ ಕೀರ್ತಿ ತಂದ ಮತ್ತೊಂದು ಸಾಧನೆ. ೧೯೩೯ರ ಸೆಪ್ಟೆಂಬರಿನಲ್ಲಿ ವಿರಜಾನಂದರು ಮಾಯಾವತಿಗೆ ಹೋಗಿದ್ದಾಗ ವಿಪುಲಾನಂದರು ಆ ಬಾರಿಯೇ 'ಪ್ರಬುದ್ಧ ಭಾರತದ' ಸಂಪಾದಕರಾಗಿ ಅಲ್ಲಿಗೆ ಆಗಮಿಸಿದ್ದರು. ಅವರ ನಮ್ರ ನಿಷ್ಕಪಟ ವ್ಯವಹಾರ ಮತ್ತು ನಿಸ್ಪೃಹತೆಯು ವಿರಜಾನಂದರ ಮನಸೆಳೆದಿತ್ತು.

ಭಾರತದ ವಿಭಜನೆಯು ಸನ್ನಿಹಿತವಾಗಿದೆ. ಆಗಸ್ಟ್ ೧೫ರಂದು ಭಾರತವು ಸ್ವತಂತ್ರವಾಗುವುದರಲ್ಲಿದೆ. ಆದರೆ ಅಖಂಡ ಭಾರತವಲ್ಲ ; ಭಾರತದ ಪೂರ್ವ ಮತ್ತು ಪಶ್ಚಿಮದ ಕೆಲಭಾಗವು ಬೇರ್ಪಟ್ಟು 'ಪಾಕಿಸ್ತಾನ' ಎಂಬ ಸ್ವತಂತ್ರ ರಾಷ್ಟ್ರವೂ ಜನ್ಮ ತಾಳಲಿದೆ. ಯಾರು ಚಿರಕಾಲಕ್ಕೂ ಭಾರತವು ಅಖಂಡ ಎಂದು ಪರಿಗಣಿಸಿದ್ದರೋ ಅವರಿಗೆಲ್ಲ ದೇಶಮಾತೆಯ ಅಂಗಚ್ಛೇದವು ಸಹಜವಾಗಿಯೇ ವೇದನೆಯನ್ನುಂಟುಮಾಡಿದೆ. ಆದರೆ ಬೇರೆ ಉಪಾಯವಾದರೂ ಏನಿದೆ? ರಾಜಕೀಯ ಇತಿಹಾಸವು ಮಾನವರ ಆಸೆ, ಆಕಾಂಕ್ಷೆಗಳನ್ನು ನಿರ್ದಾಕ್ಷಿಣ್ಯವಾಗಿ ತುಳಿದು ಮುಂದೆ ಹೋಗುತ್ತಿದೆ. ಸಂಘದ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಮಾಧವಾನಂದರು ಶ್ರೀರಾಮಕೃಷ್ಣ ಮಹಾಸಂಘದ ಪರವಾಗಿ 'ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ವಂಗವಾಸಿ ಹಿಂದೂಗಳಿಗೆ ಒಂದು ನಿವೇದನೆ' ಎಂಬ ಶೀರ್ಷಿಕೆಯಲ್ಲಿ ವಿಜ್ಞಪ್ತಿಯೊಂದನ್ನು ಹೊರಡಿಸಿದ್ದರು. ಅದರಿಂದ ಆರಿಸಿದ ಕೆಲವು ಅಂಶಗಳನ್ನು ಇಲ್ಲಿ ನೀಡಲಾಗಿದೆ :

''ನೌಖಾಲಿಯ ದಾರುಣ ದೃಶ್ಯವು ಮನಸ್ಸಿನಿಂದ ಮರೆಯಾಗುತ್ತಿದ್ದಂತೆಯೆ ಹಿಂದೂಗಳು ಮತ್ತೊಂದು ದಾರುಣ ಘಳಿಗೆಯನ್ನು ಎದುರಿಸಬೇಕಾಗಿದೆ. ರಾಜಕೀಯ ದೃಷ್ಟಿಯಿಂದ ಪೂರ್ವವಂಗವಾಸಿಗಳು ಮತ್ತು ಸುರಮಾ ಉಪತ್ಯಕಾವಾಸಿ ಹಿಂದೂಗಳು ಇಂದು ತಮ್ಮ ಸ್ವಂತ ನೆಲೆಯಿಂದ ಬೇರ್ಪಟ್ಟರು. ಅವರೆಲ್ಲರ ಮನದಲ್ಲಿಂದು ಬಹುಶಃ ನಾವುಗಳು ಭಾರತದೊಂದಿಗಿನ ಬಾಂಧವ್ಯ, ವ್ಯವಹಾರ, ಸಾಂಸ್ಕೃತಿಕ, ಸಾಮಾಜಿಕ, ಆಧ್ಯಾತ್ಮಿಕವಾದ ಎಲ್ಲ ಸಂಬಂಧಗಳನ್ನೂ ಕಳೆದುಕೊಳ್ಳುತ್ತಿರುವೆವೇನೋ ಎಂಬ ಆತಂಕ ಉಂಟಾಗಿದೆ. ಮೇಲೆ ಹೇಳಿದಂತಹ ಸ್ಥಳಗಳಲ್ಲಿ ಎಂತೆಂತಹ ಬೀಭತ್ಸ ಘಟನೆಗಳು ನಡೆಯುತ್ತಿವೆಯೆಂದರೆ ಅದರಿಂದಾಗಿ ಆತಂಕವು ಮತ್ತು ಹೆಚ್ಚುತ್ತಲಿದೆ.

''ಈ ಎಲ್ಲ ಬಗೆಯ ಶೋಚನೀಯ ಪರಿಸ್ಥಿತಿಗಳಿಂದಾಗಿ ನಾವೆಲ್ಲರೂ ತುಂಬ ವಿಚಲಿತರಾಗಿದ್ದೇವೆ. ಆದರೂ ಪೂರ್ವವಂಗ

ದಲ್ಲಿರುವ ನಮ್ಮ ಸಹಧರ್ಮೀಯರಿಗೆ ಹೇಳುವುದೇನೆಂದರೆ, ಇಂತಹ ವಿಷಮ ಪರಿಸ್ಥಿತಿಯಲ್ಲಿ ಕೇವಲ ವಿಹ್ವಲವಾಗುವುದರಿಂದ ಏನೂ ಪ್ರಯೋಜನವಾಗದು. ಈ ಸಂದರ್ಭದಲ್ಲಿ ಅಗತ್ಯ ವಾಗಿರುವುದು ಶಾಂತಚಿತ್ತರಾಗಿ ಕಾರ್ಯದಲ್ಲಿ ತತ್ಪರರಾಗುವುದು. ಶ್ರೀರಾಮಕೃಷ್ಣ-ವಿವೇಕಾನಂದರ ಮತ್ತು ಹಿಂದೂಧರ್ಮದ ಉತ್ಕೃಷ್ಟವಾದ ಮೌಲ್ಯಾಧಾರಿತ ಸಂದೇಶವನ್ನು ಆಧಾರವಾಗಿಟ್ಟು ಕೊಂಡು ಈ ಸಂದಿಗ್ಧಕಾಲದಲ್ಲಿ ಧೈರ್ಯ-ಸ್ಥೈರ್ಯಗಳನ್ನು ತೋರಬೇಕು. ಈಗ ಹಿಂದೂಗಳೆಲ್ಲರೂ ಹೆಚ್ಚಿನ ವಿಶ್ವಾಸ ಮತ್ತು ದೃಢತೆಯನ್ನವಲಂಬಿಸಿ ತಮ್ಮ ಸ್ಥಾನಮಾನಗಳನ್ನು ರಕ್ಷಿಸಿಕೊಳ್ಳ ಬೇಕು. ಹಿಂದೂ ಧರ್ಮವು ವಿನಾಶವಾಗಲು ಸಾಧ್ಯವಿಲ್ಲವೆಂಬು ದರಲ್ಲಿ ವಿಶ್ವಾಸವಿರಿಸಬೇಕು. ''ಹಿಂದೂಧರ್ಮವೇ ಸನಾತನ ಧರ್ಮ... ಹಿಂದೂಧರ್ಮವು ಯುಗದ ಆದಿಯಿಂದಲೂ ಇದೆ, ಮುಂದೆಯೂ ಇರುತ್ತದೆ'' ಎಂದು ಶ್ರೀರಾಮಕೃಷ್ಣರು ಹೇಳಿ ದ್ದಾರೆ. ನಾವು ಹಿಂದೂಗಳಾದ್ದರಿಂದಲೇ 'ಹಿಂದೂ' ಎಂಬ ಹೆಸರಿ ನಲ್ಲಿ ಗರ್ವಿತರಾಗುತ್ತಿದ್ದೇವೆ ಎಂಬುದು ಸತ್ಯವಲ್ಲ. ಆದರೆ ಹಿಂದುತ್ವ ದಲ್ಲಿ ಅದೆಂತಹ ಅಮೂಲ್ಯವಾದ, ಅಪೂರ್ವವಾದ ಸತ್ಯವಡ ಗಿದೆ ಎಂದರೆ ಅದಕ್ಕೆ ಧಕ್ಕೆಯುಂಟಾದರೆ ಇಡೀ ಜಗತ್ತಿಗೇ ಪರಿ ತಾಪವುಂಟಾಗುತ್ತದೆ. ಅಂತರ್ವಿಹಿತವಾದ ಈ ಮಹಾನ್ ಶಕ್ತಿ ಯಿಂದಲೇ ಹಿಂದೂಧರ್ಮವು ಈವರೆಗೂ ಸಹಸ್ರಾರು ವಿಪತ್ತು ಗಳನ್ನು ಮೆಟ್ಟಿ ನಿಂತಿದೆ. ಮತ್ತು ಭವಿಷ್ಯದಲ್ಲಿಯೂ ಸಹ ಬರುವ ಎಲ್ಲ ವಿಪತ್ತುಗಳನ್ನು ನಿವಾರಿಸಿಕೊಂಡು ಮೇಲೇಳುತ್ತದೆ...

''ದಿಟವಾಗಿಯೂ ಈಗಿನ ಪರಿಸ್ಥಿತಿ ನಾವು ಜಯಿಸಲಾರ ದಷ್ಟು ನಿರಾಶಾಜನಕವಾದುದೇನಲ್ಲ. ಹಿಂದೆ ಇದಕ್ಕೂ ಕಡಿಮೆ ಸಂಖ್ಯೆಯ ಜನರು, ಅಷ್ಟೇಕೆ ಅಲ್ಪ ಸಂಖ್ಯಾತ ಸಂಪ್ರದಾಯ ಗಳೂ ಸಹ ಕೇವಲ ಆತ್ಮರಕ್ಷಣೆಯನ್ನು ಮಾಡಿಕೊಂಡದ್ದಷ್ಟೇ ಅಲ್ಲ, ಅವರುಗಳು ಇತಿಹಾಸದ ಗತಿಯನ್ನೇ ಬದಲಾಯಿಸಿಬಿಟ್ಟಿದ್ದರು. ಕೇವಲ ಸಂಖ್ಯೆಯಿಂದ ಏನೂ ಸಾಧಿ ಸಲಾಗದು...

''ಎಲ್ಲರೂ ಒಮ್ಮೆಗೇ ದೇಶತ್ಯಾಗ ಮಾಡುವ ಪ್ರಮೇಯ ಈಗಲೇ ಏನೂ ಉದ್ಭವವಾಗದು. ಏಕೆಂದರೆ ಈ ಬಗೆಯ ವಿಶಾಲ ಜನಸ್ತೋಮವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು ಯಾವುದೇ ಶಕ್ತಿಶಾಲಿ ಸರ್ಕಾರಕ್ಕೂ ಅಸಾಧ್ಯ ವಾದದ್ದು.

''ವಿಶೇಷವಾಗಿ ಹಿಂದೂಗಳು ದೀನಹೀನ ಭಾವನೆಯನ್ನಿಟ್ಟು ಕೊಳ್ಳುವುದು ಸಮಂಜಸವಲ್ಲ. ಇದರಿಂದ ಉಪಕಾರವಾಗುವ ಬದಲು ಸರ್ವನಾಶವೇ ಆಗುತ್ತದೆ. ಶ್ರೀಮಂತ, ಪ್ರತಿಷ್ಠಿತ ಹಿಂದೂಗಳೂ ದೇಶತ್ಯಾಗದ ವಿರೋಧಿಗಳು; ಇದರಿಂದಾಗಿ ಬಡವರಾದ ಹಿಂದೂಗಳು ಮತ್ತೂ ಅಸಹಾಯಕರಾಗುತ್ತಾರೆ, ಅಲ್ಲದೇ ಇತರರಿಂದ ಅಧಿಕತರ ಹಿಂಸಾಚಾರಕ್ಕೆ ಗುರಿಯಾಗು ತ್ತಾರೆ. ಅಷ್ಟೇ ಏಕೆ ಮತಾಂತರಗೊಳ್ಳಲೂ ಸಹ ಬದ್ಧರಾಗ ಬೇಕಾಗುತ್ತದೆ. ಇದು ಎಲ್ಲಕ್ಕಿಂತ ಹೆಚ್ಚಾಗಿ ನಪುಂಸಕತನವನ್ನು ತೋರುತ್ತದೆ.

''ಸದ್ಯಕ್ಕೆ ಯುಕ್ತಿಯುಕ್ತವಾದುದೇನೆಂದರೆ, ಹಿಂದೂ ಸಮಾ ಜವು ಐಕ್ಯಭಾವದಿಂದ ಪುನಸ್ಸಂಘಟಿತವಾಗಿ ಉತ್ತಮ ರೂಪ ದಲ್ಲಿ ಈ ವಿಪತ್ತನ್ನೆದುರಿಸುವುದು. ಹೀಗೆ ಮಾಡಬೇಕಾದಲ್ಲಿ ಅಸ್ಪೃಶ್ಯತೆ, ಉಚ್ಚ ವರ್ಣದವರ ವಿಶೇಷಾಧಿಕಾರ ಮತ್ತು ಅನ್ಯ ವರ್ಣಗಳ ಅವಹೇಳನ ಮುಂತಾದ ಸಾಮಾಜಿಕ ಪಿಡುಗು ಗಳಿಂದ ನಾವು ಮೊದಲು ಮುಕ್ತರಾಗಬೇಕು. ಅಲ್ಲದೆ ಪುರೋ ಹಿತ ವರ್ಗದವರು ಸಕಲ ಜಾತಿಯ ಹಿಂದೂಗಳ ಮನೆಗೆ ಹೋಗಿ ಪೌರೋಹಿತ್ಯ ನಡೆಸಬೇಕು; ನಾಪಿತ ವರ್ಗದವರು ಎಲ್ಲ ಜಾತಿ ಯವರಿಗೂ ಕ್ಷೌರ ಕರ್ಮಗಳನ್ನು ಮಾಡಬೇಕು ಮತ್ತು ಧೋಬಿ ಗಳು ಎಲ್ಲ ಜಾತಿಯವರ ವಸ್ತ್ರಗಳನ್ನೂ ಮಡಿಗೊಳಿಸಬೇಕು. ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಕಲ್ಯಾಣಿ, ಶಾಲೆ ಮುಂತಾ ದೆಡೆಗಳಲ್ಲಿ ಎಲ್ಲ ಹಿಂದೂಗಳಿಗೂ ಸಮಾನ ಅಧಿಕಾರವಿರಬೇಕು. ಮನೆಯಲ್ಲಿ ಸೇವಕರನ್ನಿಟ್ಟುಕೊಳ್ಳುವಾಗ ಜಾತಿ ವಿಚಾರದಲ್ಲಿ ಉದಾರತೆಯನ್ನು ತೋರಬೇಕು. ಈಗ ಜಾತಿಯಿಂದ ವಾಸ್ತವ ವಾಗಿ ಏನೂ ಉಪಯೋಗವಿಲ್ಲ. ಚಾರಿತ್ರ್ಯ ಮತ್ತು ಆಚರಣೆ ಗಳನ್ನು ನೋಡಿ ಮನುಷ್ಯರ ಮೌಲ್ಯವನ್ನು ಅಳೆಯಬೇಕು......

''ಪೂರ್ವವಂಗದ ನಿವಾಸಿಗಳಾಗಿರುವ ಹಿಂದೂಗಳಿಗೆ ನಾವು ನೆನಪು ಮಾಡಿಕೊಡುತ್ತಿರುವುದೇನೆಂದರೆ ದುಷ್ಕರ್ಮಿಗಳು ಒತ್ತಾಯ ದಿಂದ ಯಾರನ್ನಾದರೂ ಮತಾಂತರಗೊಳಿಸಿದರೆ, ನಿಷಿದ್ಧ ಖಾದ್ಯ ವನ್ನು ತಿನ್ನಿಸಿದರೆ, ಸ್ತ್ರೀ ಅಪಹರಣ ಮಾಡಿದರೆ ಅಥವಾ ಇನ್ನು ಯಾವುದಾದರೂ ರೀತಿಯ ದುಷ್ಕೃತ್ಯಗಳನ್ನೆಸಗಿದರೆ ಅದರಿಂದ ಧರ್ಮವೇನೂ ನಾಶವಾಗಲಾರದು. ಈ ಬಗೆಯ ಅತ್ಯಾಚಾರ ಕ್ಕೊಳಗಾದ ಸ್ತ್ರೀಪುರುಷರನ್ನು ವಿಳಂಬ ಮಾಡದೆ, ಗೌರವ ಪೂರ್ವಕವಾಗಿ ಪುನಃ ಸಮಾಜಕ್ಕೆ ಸೇರಿಸಿಕೊಳ್ಳಬೇಕು.

''ಎಲ್ಲಕ್ಕಿಂತ ಹೆಚ್ಚಾಗಿ ಪಾಕಿಸ್ತಾನದ ಹಿಂದೂಗಳು ಸ್ವಾವ ಲಂಬಿಗಳಾಗಬೇಕು. ಭಾರತದ ಹಿಂದೂ ಸಮಾಜವು ಅವರನ್ನು ಮರೆತುಬಿಡುವುದಿಲ್ಲ, ಬದಲು ಸಹಾಯಹಸ್ತವನ್ನು ನೀಡು ತ್ತದೆ. ಹಾಗಿದ್ದರೂ ಸಹ ಪಾಕಿಸ್ತಾನದ ಹಿಂದೂಗಳಿಗೆ ತಮ್ಮದೇ ಆದ ಸಂಘಟನೆಯುಳ್ಳ ಕಾರ್ಯಪದ್ಧತಿಯಿರುವುದು ಆವಶ್ಯಕ. ಅವರಲ್ಲಿ ಸುಶಿಕ್ಷಿತರಾದ ನೇತೃತ್ವ ವಹಿಸಬಲ್ಲಂತಹ ನಾಯಕರಿ ಗೇನೂ ಕೊರತೆಯಿಲ್ಲ. ಈ ವಿಷಯದಲ್ಲಿ ಬೇರೆಯವರನ್ನು ಅವಲಂಬಿಸುವುದನ್ನು ಸಂಪೂರ್ಣವಾಗಿ ಬಿಟ್ಟು ಪೂರ್ವವಂಗದ ಹಿಂದೂಗಳು ಇತರರಿಗೆ ಮಾರ್ಗದರ್ಶಕರಾಗಬೇಕಾಗಿದೆ.

''ಹೆಚ್ಚಾಗಿ ಹೇಳಬೇಕೆಂದರೆ ಪರೀಕ್ಷಿಸದೆಯೆ ಬಹುಸಂಖ್ಯಾ ತರ ಮೇಲೆ ವಿಶ್ವಾಸ ಕಳೆದುಕೊಳ್ಳುವುದು ಅನಾವಶ್ಯಕ. ರಾಷ್ಟ್ರ

ವನ್ನು ಮುನ್ನಡೆಸುವ ಕಠಿಣ ವಾಸ್ತವತೆಯು ಅವರ ಎದುರಾದಾಗ ಪಾಕಿಸ್ತಾನ ಸರ್ಕಾರವು ಕಡೇಪಕ್ಷ ರಾಷ್ಟ್ರದ ಹಿತಕ್ಕಾಗಿ, ಬೃಹತ್ತಾದ, ಸುಶಿಕ್ಷಿತ, ಪ್ರಭಾವಶಾಲಿಯಾದ ಹಿಂದೂ ಸಂಪ್ರದಾಯದ ಸಹಕಾರವನ್ನು ಯಾಚಿಸುವುದಕ್ಕೆ ಕಟ್ಟು ಬೀಳಬೇಕಾಗುತ್ತದೆ. ವಿಶೇಷತಃ ಈ ಎರಡು ಸಂಪ್ರದಾಯಗಳ ಜೀವನ ಕ್ರಮವು ಪರಸ್ಪರ ಅದೆಷ್ಟು ಬೆಸೆದುಕೊಂಡಿದೆಯೆಂದರೆ ಈ ಸಂಪ್ರದಾಯಗಳು ಹೆಚ್ಚು ದಿನ ಶತ್ರುತ್ವವನ್ನು ಸಾಧಿಸಲು ಸಾಧ್ಯವಿಲ್ಲ. ನೈತಿಕ ನೆಲೆಯಿಂದ ನೋಡಿದಾಗಲೂ ಸಹ, ಕಾಲಪ್ರಭಾವದಿಂದ ವಿಭ್ರಾಂತರೂ, ಧರ್ಮೋನ್ಮತ್ತರೂ ಆದ ಜನತೆಯ ನಡುವೆಯೂ ಮತ್ತೆ ಸುಬುದ್ಧಿ ಜಾಗೃತವಾಗಿ, ಅವರು ಇನ್ನೂ ಹೆಚ್ಚಿನ ಸಭ್ಯತೆಯೊಡನೆ ವ್ಯವಹರಿಸುತ್ತಾರೆ ಎಂದೆನಿಸುತ್ತದೆ. ಹಿಂದೂಗಳ ನೈತಿಕ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಶಕ್ತಿಯು ಬೇರೆ ಸಂಪ್ರದಾಯಗಳ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ......

''ಪೂರ್ವ ಮತ್ತು ಪಶ್ಚಿಮ ವಂಗವು ಉತ್ತರಾಧಿಕಾರ ಬಲದಿಂದ ಯಾವೊಂದು ಅಮೂಲ್ಯಧನ ಪಡೆದಿದೆಯೋ ಮತ್ತು ಈರ್ವರ ನಡುವೆ ಯಾವೊಂದು ಗಂಭೀರವಾದ ಪ್ರೇಮಬಂಧನವಿದೆಯೋ ಅದರ ಬಗ್ಗೆ ಪಶ್ಚಿಮ ವಂಗದವರ ದೃಷ್ಟಿಯನ್ನು ಸೆಳೆಯುತ್ತಿದ್ದೇನೆ. ಪಶ್ಚಿಮ ವಂಗವು ಮತ್ತೆ ದೃಢಪಡಿಸಬೇಕಾಗಿರುವುದೇನೆಂದರೆ, ಸ್ವಾರ್ಥಕ್ಕೋಸ್ಕರ ಪಶ್ಚಿಮವಂಗವು ಪೂರ್ವವಂಗವನ್ನು ದೌರ್ಭಾಗ್ಯದ ಬಾಯಿಗೆ ತಳ್ಳಲಿಲ್ಲ... ಪಶ್ಚಿಮ ವಂಗವು ಇಂದು ಪೂರ್ವವಂಗಕ್ಕೆ ಅದು ತನ್ನ ಹಿರಿಯಣ್ಣನೆಂಬುದನ್ನು ತಿಳಿಸಿಕೊಡಬೇಕು.

ಸ್ವಾಮಿ ಮಾಧವಾನಂದ, ಕಾರ್ಯದರ್ಶಿ,
ರಾಮಕೃಷ್ಣ ಮಿಷನ್, ಬೇಲೂರು ಮಠ,
೧ನೇ ಆಗಸ್ಟ್ ೧೯೪೭''

ಆಗಸ್ಟ್ ೧೫ರಂದು ವಿರಜಾನಂದರು ಆಶ್ರಮವಾಸಿಗಳೊಂದಿಗೆ ಚಿಕ್ಕ ಆನಂದೋತ್ಸವವನ್ನು ನಡೆಸುವುದರ ಮೂಲಕ, ಉದಯವಾದ ಸ್ವತಂತ್ರ ಭಾರತಕ್ಕೆ ಅಭಿನಂದನೆ ಸಲ್ಲಿಸಿದರು. ಸ್ವಾತಂತ್ರ್ಯದ ಪ್ರಯುಕ್ತ ವಿಶಾಖಪಟ್ಟಣದಲ್ಲಿ ಏರ್ಪಡಿಸಲಾಗಿದ್ದ ಮೆರವಣಿಗೆಯನ್ನು ನೋಡಿಬಂದರು. ಕೆಲವು ದಿನಗಳ ನಂತರ ಬೇಲೂರು ಮಠದಲ್ಲಿ ಈ ಸ್ಮರಣೀಯ ದಿನವನ್ನು ಹೇಗೆ ಆಚರಿಸಿದರೆಂಬುದರ ವರದಿ ಬಂದಿತು. ಅಲ್ಲಿ ರಾತ್ರಿ ೧೨ ಗಂಟೆ ೧ ನಿಮಿಷಕ್ಕೆ ದೇವಮಂದಿರದಲ್ಲಿ ಶಂಖಧ್ವನಿಯೂ, ವೇದ ಘೋಷವೂ ನಡೆಯಿತು. ಸೂರ್ಯೋದಯದ ನಂತರ ಉಪಾಧ್ಯಕ್ಷರಾದ ಸ್ವಾಮಿ ಶಂಕರಾನಂದರಿಂದ ಸ್ವಾಮೀಜಿಯವರ ಕೊಠಡಿಯ ಮೇಲೆ ರಾಷ್ಟ್ರಧ್ವಜವು ಹಾರಿಸಲ್ಪಟ್ಟಿತು. ಮಠದ ಕಛೇರಿಯ ಮೇಲೆ ಸ್ವಾಮಿ ಮಾಧವಾನಂದರಿಂದ ಧ್ವಜವು ಹಾರಿಸಲ್ಪಟ್ಟಿತು. ಇವರೀರ್ವರೂ ಸಂಕ್ಷಿಪ್ತವಾಗಿ ಭಾಷಣ ಮಾಡಿದರು. ಅಷ್ಟೇ ಅಲ್ಲದೆ ಪ್ರಭಾತ ಫೇರಿ, ವಿಶೇಷ ಪೂಜೆ, ನೈವೇದ್ಯ, ಶಾಸ್ತ್ರ ಪಠಣ ಮತ್ತು ದರಿದ್ರ ನಾರಾಯಣ ಸೇವಾಂಗವಾಗಿ ವಸ್ತ್ರ ವಿತರಣೆ ಮತ್ತಿತರ ಕಾರ್ಯಕ್ರಮಗಳು ಜರುಗಿದವು.

ಲಾಹೋರಿನ ಶ್ರೀರಾಮಕೃಷ್ಣ ಮಠವು ತನ್ನ ಕಾರ್ಯರಂಗವನ್ನು ಕ್ರಮೇಣ ವಿಸ್ತರಿಸಿಕೊಂಡು ಬೆಳೆಯಲಾರಂಭಿಸಿತ್ತು. ವಿರಜಾನಂದರು ಡೆಹರಾಡೂನಿನಲ್ಲಿ ತಂಗಿದ್ದ ಸಮಯದಲ್ಲಿ ಲಾಹೋರ್ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಆದ್ಯಾನಂದರು ಆಗಿಂದಾಗ್ಗೆ ಉತ್ಸಾಹವುಳ್ಳ ಭಕ್ತರನ್ನು ಕರೆದುಕೊಂಡು ಡೆಹರಾಡೂನಿಗೆ ಬಂದು ಅವರ ದರ್ಶನ ಮಾಡಿ ಹೋಗುತ್ತಿದ್ದರು. ಪಂಜಾಬಿನ ಹಿಂದೂಗಳಲ್ಲಿ ರಾಮಕೃಷ್ಣ ಭಾವಧಾರೆಯು ಕ್ರಮೇಣ ಹರಡುತ್ತಿದ್ದುದನ್ನು ಕಂಡು ವಿರಜಾನಂದರೂ ಸಂತೋಷಪಟ್ಟಿದ್ದರು. ಆದರೆ ಪಾಕಿಸ್ತಾನವು ಜನ್ಮತಾಳುವ ಮೊದಲಿಂದಲೂ ಲಾಹೋರಿನಲ್ಲಿ ಆಗುತ್ತಿದ್ದ ಕೋಮುಗಲಭೆಗಳ ಪರಿಣಾಮವಾಗಿ ಆ ಕೇಂದ್ರವನ್ನು ಮುಂದುವರಿಸುವುದು ಕಷ್ಟವಾಯಿತು. ಅನಂತರದಲ್ಲಿ ತಿಳಿದು ಬಂದದ್ದೇನೆಂದರೆ ಲಾಹೋರಿನ ಪರಿಸ್ಥಿತಿ ತೀರಾ ಹದಗೆಟ್ಟ ಕಾರಣ ಆಗಸ್ಟ್ ೧೭ರಂದು ಆದ್ಯಾನಂದರು ಇಬ್ಬರು ಬ್ರಹ್ಮಚಾರಿಗಳೊಂದಿಗೆ ಅಮೃತಸರಕ್ಕೆ ಬಂದುಬಿಡಬೇಕಾಯಿತು. ಅಲ್ಲಿ ಎರಡು ದಿನ ಪೋಲೀಸ್ ರಕ್ಷಣೆಯಲ್ಲಿದ್ದು ೨೨ಕ್ಕೆ ದೆಹಲಿಯನ್ನು ತಲುಪಿದರು.

ವಿಶಾಖಪಟ್ಟಣದಲ್ಲಿ ನಾಲ್ಕು ತಿಂಗಳು ಕಳೆದು, ವಿರಜಾನಂದರು ಡೆಹರಾಡೂನಿಗೆ ಹೋಗುವ ಮಾರ್ಗವಾಗಿ ಸೆಪ್ಟೆಂಬರ್ ೧ರಂದು ಬೇಲೂರು ಮಠದಲ್ಲಿ ಇಳಿದು ಏಳು ದಿನಗಳಿದ್ದರು. ಆಗ ಬೇಲೂರು ಮಠದ ಸುತ್ತಮುತ್ತಲೂ ಕೋಮುಗಲಭೆಗಳು ನಡೆಯುತ್ತಿದ್ದವು. ಪರಿಸ್ಥಿತಿಯು ಬಹಳ ಬಿಕ್ಕಟ್ಟಿನಲ್ಲಿತ್ತು. ಕೃಷ್ಣ ಜನ್ಮಾಷ್ಟಮಿಯಂದು ಸಂಜೆ ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳಾದ ಶ್ರೀ ಪ್ರಫುಲ್ಲ ಘೋಷರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಶಂಕರ್ ರಾವ್ ದೇವ್ ಎಂಬುವರನ್ನು ಕರೆದುಕೊಂಡು ಬೇಲೂರು ಮಠಕ್ಕೆ ಬಂದು, ವಿರಜಾನಂದರೊಡನೆ ಸ್ವಲ್ಪ ಸಮಯವನ್ನು ಕಳೆದಿದ್ದರು. ಕೋಮುಗಲಭೆಗಳಿದ್ದರೂ ಸಹ ಮಹಾರಾಜರ ದರ್ಶನ ಪಡೆಯಲು ಭಕ್ತರು ಕೊಲ್ಕತ್ತ ಮತ್ತು ಸುತ್ತಮುತ್ತಲ ಸ್ಥಳಗಳಿಂದ ಬರುತ್ತಲೇ ಇದ್ದರು.

೧೦ನೇ ಸೆಪ್ಟೆಂಬರ್ ಮಹಾರಾಜರು ಡೆಹರಾಡೂನ್ ತಲುಪಿದರು (೧೯೪೭). ಇಲ್ಲಿಯೂ ಸಹ ಉಗ್ರವಾದ ಗಲಭೆಗಳು ನಡೆಯುತ್ತಿದ್ದು ಕರ್ಫ್ಯೂ ಜಾರಿಯಲ್ಲಿತ್ತು. ಪರಿಸ್ಥಿತಿಯು ಶಾಂತವಾಗಲು ಎರಡು ತಿಂಗಳು ಬೇಕಾಯಿತು. ಅಷ್ಟು ಹೊತ್ತಿಗಾಗಲೇ ಪೂರ್ವ ಪಂಜಾಬಿನಲ್ಲಿ ಮಿಷನ್ನು ನಿರಾಶ್ರಿತರಿಗೆ ಪುನರ್ವಸತಿಯನ್ನಾರಂಭಿಸಿತ್ತು. ನವೆಂಬರ್ ತಿಂಗಳಿಂದ ಕುರುಕ್ಷೇತ್ರದಲ್ಲಿ ವ್ಯಾಪಕವಾದ ರೀತಿಯಲ್ಲಿ ಪರಿಹಾರ ಕಾರ್ಯವನ್ನು ಮುಂದುವರಿಸಲಾಗಿತ್ತು. ಸುಮಾರು ಎಂಟು ತಿಂಗಳ ಕಾಲ ಮಿಷನ್ ಈ

ಕೆಲಸದಲ್ಲಿ ನಿರತವಾಗಿರಬೇಕಾಯಿತು. ಪೂರ್ವ ಪಾಕಿಸ್ತಾನದ ಚಟ್ಟೋ ಗ್ರಾಮವೊಂದರಲ್ಲೂ ಸಹ ನೆರೆಪರಿಹಾರ ಕಾರ್ಯವು ನಡೆಯುತ್ತಿತ್ತು.

ಇದೇ ಸಮಯದಲ್ಲಿ ಲಂಡನ್ನಿನ ವೇದಾಂತ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಅವ್ಯಕ್ತಾನಂದರ ನೇತೃತ್ವದಲ್ಲಿ ಏಳು ಜನ ಇಂಗ್ಲಿಷರಿಂದೊಡಗೂಡಿದ 'ಭಾರತ-ಬ್ರಿಟಿಷ್ ಹಿತೇಚ್ಛಾ ಮಂಡಲಿ' (Indo-British Goodwill Mission) ಭಾರತಕ್ಕೆ ಬಂದಿತ್ತು. ಭಾರತ ಮತ್ತು ಬ್ರಿಟನ್ನಿನ ನಡುವೆ ಬಾಂಧವ್ಯ ಮತ್ತು ಸಾಂಸ್ಕೃತಿಕ ವಿನಿಮಯವೇ ಇದರ ಉದ್ದೇಶ. ಸುಮಾರು ಆರು ತಿಂಗಳ ಕಾಲ ಈ ಮಂಡಳಿಯು ಭಾರತದ ನಾನಾ ಸ್ಥಳಗಳಲ್ಲಿ ಸಂಚರಿಸಿ, ಭಾಷಣಗಳನ್ನೂ ಸಹ ನೀಡಿತ್ತು. ನವೆಂಬರ್ ೫ಕ್ಕೆ ಈ ಮಂಡಲಿಯು ಡೆಹರಾಡೂನನ್ನು ತಲುಪಿತು. ಬಹಳ ವರ್ಷಗಳ ನಂತರ ಅವ್ಯಕ್ತಾನಂದರನ್ನು ಕಂಡ ವಿರಜಾನಂದರಿಗೆ ತುಂಬ ಸಂತೋಷವಾಯಿತು. ಮಾರನೇ ದಿನ ಮಹಾರಾಜರ ಆಣತಿ ಯಂತೆ ಆ ಮಂಡಲಿಯ ಸದಸ್ಯರನ್ನು 'ಶ್ರೀರಂಗಂ'ಗೆ ಕರೆದು ಸನ್ಮಾನ ಸತ್ಕಾರ ನೀಡಲಾಗಿತ್ತು.

ಈ ಬಾರಿ ಮಹಾರಾಜರು ಡೆಹರಾಡೂನಿನಲ್ಲಿ ಇದ್ದ ಎರಡು ತಿಂಗಳ ಸಮಯದಲ್ಲಿ ಮಠದ ಇಬ್ಬರು ಹಿರಿಯ ಸಂನ್ಯಾಸಿಗಳ ದೇಹತ್ಯಾಗವಾಗಿತ್ತು. ಇದು ಮಹಾರಾಜರಿಗೆ ತುಂಬ ನೋವು ತಂದಿತ್ತು. ದೇವಘರದ ವಿದ್ಯಾಪೀಠದ ಸ್ಥಾಪಕರೂ ಮತ್ತು ಬಹು ವರ್ಷಕಾಲ ಅದರ ಮೇಲ್ವಿಚಾರಕರೂ ಆಗಿದ್ದ ಸ್ವಾಮಿ ಸದ್ಭಾವಾ ನಂದರು ೧೯೪೭ರ ಸೆಪ್ಟೆಂಬರ್ ೧೩ರಂದು ಮಿಹಿಜಾಮಿನಲ್ಲಿ ತಮ್ಮ ೫೭ನೇ ವಯಸ್ಸಿನಲ್ಲಿ ಹೃದ್ರೋಗದಿಂದಾಗಿ ದೇಹತ್ಯಾಗ ಮಾಡಿದ್ದರು. ಅವರಂತಹ ದಣಿವರಿಯದ ಕರ್ಮಯೋಗಿಯ ಸ್ಥಾನವನ್ನು ಕೂಡಲೇ ತುಂಬಿಸಲಾರದಾಗಿತ್ತು. ತೀವ್ರ ವ್ಯಾಧಿ ಯಿಂದಾಗಿ ಅವರು ದೇವಘರದ ಕೆಲಸಕ್ಕೆ ವಿದಾಯ ಹೇಳಿದ್ದರು. ಶರೀರವು ಸ್ವಲ್ಪ ಸ್ವಸ್ಥವಿದ್ದಾಗ ಕೆಲ ಸಮಯ ಆಸಾನ್‌ಸೋಲಿನ ಶಾಖಾಕೇಂದ್ರದ ಜವಾಬ್ದಾರಿಯನ್ನೂ ಹೊತ್ತಿದ್ದರು. ನವೆಂಬರಿನ ಕೊನೆಯಲ್ಲಿ ತಿಳಿದು ಬಂದದ್ದೇನೆಂದರೆ ಸ್ವಾಮಿ ಅನಂತಾನಂದರು (ಕಾನ್ಹಾಯ್) ಮಂಗಳೂರಿನ ಆಶ್ರಮದಲ್ಲಿ ಇದ್ದಕ್ಕಿದಂತೆ ಉದರ ಶೂಲೆಯಿಂದಾಗಿ ನವೆಂಬರ್ ೧೯ರಂದು ಶರೀರತ್ಯಾಗ ಮಾಡಿದ್ದರು. ವಯಸ್ಸು ೭೭ ಆಗಿತ್ತು. ಕೆಲವು ತಿಂಗಳ ಹಿಂದೆಯೂ ಅವರೊಂದಿಗೆ ಮಹಾರಾಜರ ಭೇಟಿಯಾಗಿತ್ತು. ಕೆಲವು ದಿನಗಳ ಹಿಂದಷ್ಟೆ ಅವರ ವಿಜಯದಶಮಿಯ ಪತ್ರ ಬಂದಿತ್ತು. ಮಹಾರಾಜರೂ ಸಹ ಅದಕ್ಕೆ ಉತ್ತರಿಸಿದ್ದರು.*

* ಪ್ರತಿ ವರ್ಷವೂ ವಿಜಯದಶಮಿ ಹಾರೈಕೆಯ ಮುದ್ರಿತ ಪತ್ರದ ಕೆಳಗೆ ವಿರಜಾನಂದರು ತಾವೇ ಅನಂತಾನಂದರಿಗೆ ಸ್ವಾರಸ್ಯಕರವಾದ ಕೆಲವು ಸಾಲುಗಳನ್ನು ಬರೆಯುತ್ತಿದ್ದರು. ಅನಂತಾನಂದರು, ''ಮಹಾರಾಜ್, ನಿಮ್ಮ 'ವಿಜಯಾ' ಪತ್ರ ವನ್ನು ಇಡೀ ವರ್ಷ ನನ್ನ ಪ್ಯಾಡಿನ ರಟ್ಟಿನಲ್ಲಿ ಇಟ್ಟಿರುತ್ತೇನೆ. ನನ್ನ ಜೊತೆಜೊತೆಗೇ ಅದು ಸುತ್ತಾಡುತ್ತದೆ'' ಎಂದಿದ್ದರು.

ಭಾರತ ಸರ್ಕಾರದ ನೆರವು ಪಡೆದು ರಾಮಕೃಷ್ಣ ಮಿಷನ್ನು ನಿರಾಶ್ರಿತರಿಗೆ ಹಾಲು ಔಷಧ ಮತ್ತು ವಸ್ತ್ರಾದಿಗಳನ್ನು ವಿತರಿಸು ತ್ತಲಿದೆ ಎಂದು ಕುರುಕ್ಷೇತ್ರದಿಂದ ಬಂದ ಪತ್ರದಿಂದ ತಿಳಿದು ಬಂತು. ಈ ಸೇವಾಕಾರ್ಯವನ್ನು ೧೯೪೭ರ ನವೆಂಬರ್‌ನಲ್ಲಿ ಪ್ರಾರಂಭಿಸಿ ಮುಂದಿನ ವರ್ಷದ ಮಧ್ಯಭಾಗದವರೆಗೂ ನಡೆಸಿ ಸರ್ಕಾರದ ಮತ್ತು ಸಾರ್ವಜನಿಕರ ಪ್ರಶಂಸೆ ಪಡೆಯಿತು.

ನ್ಯೂಯಾರ್ಕಿನ ವೇದಾಂತ ಸಮಿತಿಯು ಸೆಂಟ್ ಲಾರೆನ್ಸ್ ನದಿಯಲ್ಲಿಯ ಸಹಸ್ರ ದ್ವೀಪೋದ್ಯಾನದಲ್ಲಿ ಸ್ವಾಮಿ ವಿವೇಕಾ ನಂದರ ಪುಣ್ಯಸ್ಮೃತಿಗಳಿಂದ ತುಂಬಿರುವ ಮನೆಯನ್ನು ಕೊಂಡು ಕೊಂಡಿದೆ ಮತ್ತು ಅದರ ದುರಸ್ತಿಯೂ ಆಗಿದ್ದು ಸಂರಕ್ಷಣೆಯ ವ್ಯವಸ್ಥೆಯನ್ನು ಮಾಡಲಾಗಿದೆ ಎಂಬ ಸಂತೋಷದಾಯಕ ಸುದ್ದಿ ಡಿಸೆಂಬರ್ ಕೊನೆಗೆ ಬಂದಿತು.

* * *

೧೯೪೮ನೇ ವರ್ಷದ ಜನವರಿ. ವಿರಜಾನಂದರು ಬೇಲೂರು ಮಠದಲ್ಲಿದ್ದಾರೆ. ಶ್ರೀಮಾತೆಯವರ ಜನ್ಮದಿನವು ಈ ಬಾರಿ ಜನವರಿ ೨ರಂದು ಬಂದಿದೆ. ಈ ಶುಭದಿನದಂದು ಮಠದ ಹೊರಗೆ, ಖೇಯಾಘಟ್ಟಕ್ಕೆ ಹೋಗುವ ದಾರಿಯಲ್ಲಿ ಕಟ್ಟಲಾಗಿದ್ದ ಆರು ಕೋಣೆಯ ಅತಿಥಿಗೃಹದ ಉದ್ಘಾಟನೆಯನ್ನು ವಿರಜಾ ನಂದರು ನೆರವೇರಿಸಿದರು. ನಾಲ್ಕು ದಿನಗಳ ನಂತರ ಸ್ವಾಮಿ ಶಿವಾನಂದರ ಜನ್ಮದಿನದಂದು ಮಠದ ಕಟ್ಟಡದ ವಾಯವ್ಯ ದಿಕ್ಕಿನಲ್ಲಿಯ ಭೂಮಿಯಲ್ಲಿ ಸಾಧು ನಿವಾಸದ ಒಂದಂತಸ್ತಿನ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಜನವರಿ ೬ರಂದು ಕರಾಚಿ ಆಶ್ರಮಕ್ಕೆ ಗೂಂಡಾಗಳು ನುಗ್ಗಿ ಲೂಟಿ ಮಾಡಿರುವರೆಂಬ ದುರ್ವಾರ್ತೆಯು ಮಹಾರಾಜರಿಗೆ ಜನವರಿಯ ಎರಡನೇ ವಾರದಲ್ಲಿ ತಲುಪಿತು. ಸದ್ಯಕ್ಕೆ ಆಶ್ರಮ ವಾಸಿಗಳಿಗೇನೂ ಆಗಿರಲಿಲ್ಲ. ಅಲ್ಲಿಯ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದರು ಆಗ ಬೇಲೂರು ಮಠದಲ್ಲಿಯೇ ಇದ್ದರು. ಪಾಕಿಸ್ತಾನದ ಉದಯವಾದ ನಂತರವೂ ಸಹ ಸಂಪ್ರದಾಯ ರಹಿತವಾದ ಸರ್ವಧರ್ಮ ಸಮನ್ವಯದ ಆದರ್ಶ ಹೊಂದಿರುವ ರಾಮಕೃಷ್ಣ ಮಿಷನ್ನನ್ನು ಕರಾಚಿಯಲ್ಲಿ ನಡೆಸಿಕೊಂಡು ಹೋಗು ವುದು ಕಠಿಣವೇನಲ್ಲ ಎಂಬುದು ಅವರ ನಂಬಿಕೆಯಾಗಿತ್ತು. ಅದನ್ನೇ ಅವರು ಮಹಾರಾಜರಿಗೂ ಮತ್ತೆಲ್ಲರಿಗೂ ಹೇಳು ತ್ತಿದ್ದರು. ಅಷ್ಟರಲ್ಲಿ ಬಂದಿತು ಈ ದುರ್ವಾರ್ತೆ. ತಕ್ಷಣವೇ ರಂಗ ನಾಥಾನಂದರು ಕರಾಚಿಗೆ ಹೊರಟು ನಿಂತರು. ಕರಾಚಿಯಲ್ಲಿ ಕಡಿಮೆ ಅಪಾಯದ ಸ್ಥಳದಲ್ಲಿ ಮಠವನ್ನು ಮತ್ತೂ ಆರು ತಿಂಗಳು ನಡೆಸಿದರು. ಪರಿಸ್ಥಿತಿಯು ಸಂಪೂರ್ಣವಾಗಿ ಪ್ರತಿಕೂಲ ವಾದಾಗ ಸಂಘವು ಕರಾಚಿ ಕೇಂದ್ರವನ್ನು ಮುಚ್ಚಿಬಿಟ್ಟಿತು.

*(ಮುಂದುವರಿಯುವುದು)*